# ಶಿವನಾಟ್ಯ (ಒಂದು ಸಾನೆಟ್)

## (Dance of Shiva - A Sonnet in Kannada)

ಧವಲ ಹಿಮಗಿರಿಯ ಶಿಖರದಲಿ ತಾಳ ತ-
ಮ್ಮಟೆ ಭೇರಿ ಡಮರು ಶಂಖಗಳೊಡನೆ, ಭೂತಗಣ-
ಸಹಿತ, ಅಟ್ಟಹಾಸದಿ ದಶ ದಿಕ್ಕುಗಳು ನಡುಗೆ,
ನರ್ತಿಸುತಲಿದೆ ರುದ್ರಮೂರ್ತಿ ಪ್ರತಿಯೊಂದು ಚಣ!

ನಿನ್ನ ನೃತ್ಯ ಕೋಲಾಹಲವು ಓಡಿಸುತಲಿದೆ
ದೈನ್ಯ ಕಾರ್ಪಣ್ಯಗಳನ್ನೆದೆ, ಉರಗಾಭರಣ!
ದುಷ್ಟ ಭಾವ–ದೌರ್ಜನ್ಯ–ದೈತ್ಯರ ತುಳಿತುಳಿದು
ಕೊಲ್ಲುತಿವೆ ಚಂಡತಾಂಡವ ನಾಟ್ಯರತ ಚರಣ!

ನಿನ್ನ ತಾಲದ ಕುಣಿತ ಅಣುಕಣಲ್ಲಿಹುದು;
ಬರಿ ಧವಲಗಿರಿಯಲ್ಲ ನಿನ್ನ ನೃತ್ಯಕ್ಷೇತ್ರ!
ವಿಶ್ವದಲಿ ಚೇತನೆಯ ತೀವಿ ಕುಣಿವಾತನೇ,
ನೀ ನಾಟ್ಯವಾಡೆನ್ನೆದೆಯೊಳಗು, ಮಹಾಗಾತ್ರ!
ವ್ಯಂಗ ಭಾವನೆ, ಕೋಪ, ತಾಪಗಳ ಸದೆ ಬಡೆದು
ಪೂತಗೊಳಿಸದನೆ ನೀ ರುದ್ರ, ಕರುಣೆಯಗೈದು!

– ಮಂಗೇಶ ವ್ಹಿ. ನಾಡಕರ್ಣಿ

ಟಿಪ್ಪಣಿ: ಡಾ. ಆನಂದ ಕುಮಾರಸ್ವಾಮಿಯವರ ಶಿವನಾಟ್ಯದ ಮೇಲಿನ ಕೆಲ ಲೇಖನಗಳನ್ನು ಓದಿ ಸ್ಫೂರ್ತಿಗೊಂಡು ೧೯೫೬ ರಲ್ಲಿ ಕಾಲೇಜಿನಲ್ಲಿದ್ದಾಗ ಬರೆದ ಕವನವಿದು. ಶಿವನಾಟ್ಯದ ಬಗ್ಗೆ ಇಲ್ಲಿ ಎರಡು ದೃಷ್ಟಿಕೋನಗಳುಂಟು. ಒಂದು ವೈಯಕ್ತಿಕ ಅಥವಾ ಸಮೂರ್ತ, ಇನ್ನೊಂದು ವಿಶ್ವಾತ್ಮಕ ಅಥವಾ ಅಮೂರ್ತ. ಮೊದಲ ದೃಷ್ಟಿಯಲ್ಲಿ ಧವಲ ಹಿಮಾಲಯದ ಎತ್ತರದಲ್ಲಿಯ ಶಿವನಾಟ್ಯ ಆತನ ನೈತಿಕ ನಿಷ್ಕಲಂಕವಾದ ಉನ್ನತ ನೆಲೆಯನ್ನು ತೋರಿಸುತ್ತದೆ. ಶಿವನಾಟ್ಯ ದುಷ್ಟತೆಯ ವಿರುದ್ಧದ ಶಿಷ್ಟತೆಯ ಸದಾಕಾಲದ ಸಂಘರ್ಷದ ದ್ಯೋತಕ. ವೈಶ್ವಿಕ ದೃಷ್ಟಿಯಲ್ಲಿ ಶಿವನಾಟ್ಯ ಇಡಿಯ ವಿಶ್ವದ ಚೈತನ್ಯಮಯ ಚಲನೆಯ ರೂಪಕ. ಕವಿತೆಯು ಪ್ರಾರ್ಥನೆಯೊಂದಿಗೆ ಮುಗಿಯುತ್ತದೆ. ನನ್ನ ಮನಸ್ಸಿನ ಅನಿಷ್ಟ ಪ್ರವೃತ್ತಿಗಳನ್ನು ತುಳಿದು ನಾಶಮಾಡು ಎಂದು.